**ಸಾಕ್ಷಿಯನ್ನು ದಿಃ 04.02.2026 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಿಂದಃ**

ನಾನು ಪೋಲೀಸ್ ದಾಖಲೆಗಳನ್ನು ನೋಡಿ ತಿಳಿದುಕೊಂಡಿರುತ್ತೇನೆ. ಅಪಘಾತ ಬೆಳಗ್ಗೆ 11.00 ಗಂಟೆಗೆ ಆಗಿದೆ. ಗಾಯಾಳುವಿಗೆ ತೀವ್ರ ಗಾಯ ಆಗಿದ್ದ ಕಾರಣ ಸಾಲಿಗ್ರಾಮ ಸರ್ಕಾರಿ ಆಸ್ಪತ್ರೆ, ಕೆ.ಆರ್ ನಗರ ಆಸ್ಪತ್ರೆ ನಂತರ ಮೈಸೂರು ಸಿಟಿ ಆಸ್ಪತ್ರೆಗೆ ದಾಖಲಾಗಲು ಒಂದು ದಿನ ತಡವಾಗಿತ್ತು ಎಂದರೆ ಇರಬಹುದು. ನಾನು ಅಪಘಾತವನ್ನು ಕಣ್ಣಾರೆ ಕಂಡಿರುವುದಿಲ್ಲ. ಪೋಲೀಸರು ಹಾಗೂ ಅರ್ಜಿದಾರರು ಶಾಮಿಲಾಗಿರುತ್ತಾರೆ ಎಂದು ನನಗೆ ಸಮನ್ಸ್ ಬಂದ ನಂತರ ತಿಳಿಯುತ್ತದೆ. ನಮ್ಮ ಕಂಪನಿಯಿಂದ ವರ್ಚಸ್ ಇನ್ವೆಸ್ಟಿಗೇಶನ್ ರವರಿಂದ ತನಿಖೆ ಮಾಡಿಸಿರುತ್ತೇವೆ. ಅವರು ನಮಗೆ ವರದಿ ನೀಡಿದ್ದಾರೆ. ಅವರನ್ನು ಸಾಕ್ಷಿ ವಿಚಾರಣೆ ಮಾಡಿಸಲು ತೊಂದರೆ ಇಲ್ಲ. ದೋಷರೋಪಣಾ ಪಟ್ಟಿಗೆ ಪಕ್ಷಗಾರರಲ್ಲದ ಕಾರಣ ಪ್ರಶ್ನಿಸಿಲ್ಲ. ಮಾಲೀಕರು ನಮ್ಮ ನೋಟೀಸಿಗೆ ಉತ್ತರ ನೀಡಿಲ್ಲ. ಮಾಲೀಕರು ನ್ಯಾಯಾಲಯಕ್ಕೆ ಬಂದರೆ ವಿಚಾರಣೆ ಮಾಡಿಸುತ್ತೇವೆ. ಆರೋಪಿ ದಂಡ ಕಟ್ಟಿ ಪ್ರಕರಣ ಮುಕ್ತಾಯ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಪ್ರತ್ಯಕ್ಷದರ್ಶಿ ಮಹಿಳೆ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ಭಾದ್ಯತೆಯಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಆರ್. 3 ರ ಪ್ರಕಾರ ಪರ್ಮಿಟ್ ಚಾಲ್ತಿಯಲ್ಲಿತ್ತು ಎಂದರೆ ಕೆ.ಆರ್ ನಗರ ಟೌನ್ ಲಿಮಿಟ್ಸ್ ಗೆ ಮಾತ್ರ ಚಾಲ್ತಿಯಲ್ಲಿದೆ ಎನ್ನುತ್ತಾರೆ. ಅಪಘಾತ ಸ್ಥಳದಿಂದ ಕೆ.ಆರ್ ನಗರ ಟೌನ್ ಲಿಮಿಟ್ ಎಷ್ಟು ದೂರ ಇದೆ ಎಂದು ತಿಳಿದುಕೊಂಡಿದ್ದೀರಾ ಎಂದರೆ 25 ಕಿ.ಮೀ ಆಗುತ್ತದೆ. ಸಾಕ್ಷಿ ಮುಂದುವರೆದು ಅಪಘಾತ ಸ್ಥಳ ಸಾಲಿಗ್ರಾಮ ತಾಲ್ಲೂಕು ಎನ್ನುತ್ತಾರೆ. 25 ಕಿ.ಮೀ ಎಂದು ತೋರಿಸಲು ದಾಖಲೆ ಹಾಜರು ಪಡಿಸಿಲ್ಲ. ಅಪಘಾತ ಸ್ಥಳ ಸಿಟಿ ಲಿಮಿಟ್ಸ್ ನಲ್ಲಿ ಬರುತ್ತದೆ ಎಂದರೆ ಸರಿಯಲ್ಲ. ವಾಹನಕ್ಕೆ ವಿಮೆ ಚಾಲ್ತಿಯಲ್ಲಿತ್ತು. ಭಾದ್ಯತೆಯಿಂದ ತಪ್ಪಿಸಿಕೊಳ್ಳಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.